# ಮಲಾಕಿಯನು

1 [1]ದೇವರಿಂದ ಬಂದ ಸಂದೇಶ. ಯೆಹೋವ
ದೇವರು ಮಲಾಕಿಯ ಮೂಲಕ ಇಸ್ರೇಲರಿಗೆ ಕೊಟ್ಟ
ಸಂದೇಶ.

### ದೇವರು ಇಸ್ರೇಲರನ್ನು ಪ್ರೀತಿಸುತ್ತಾನೆ

2ಯೆಹೋವನು, "ನಾನು ನಿಮ್ಮನ್ನೆಲ್ಲಾ ಪ್ರೀತಿಸುತ್ತೇನೆ"
ಎಂದು ಹೇಳುತ್ತಾನೆ.

ಆದರೆ ನೀವು, "ನೀನು ಪ್ರೀತಿಸುವುದಕ್ಕೆ ಗುರುತೇನು?"
ಎಂದು ಕೇಳುತ್ತೀರಿ.

ಯೆಹೋವನು ಅದಕ್ಕುತ್ತರವಾಗಿ, "ಏಸಾವನು
ಯಾಕೊಬನ ಅಣ್ಣನಲ್ಲವೋ? ಆದರೆ ನಾನು ಯಾಕೋಬ
ನನ್ನು ಆರಿಸಿಕೊಂಡೆನು. 3ಏಸಾವನನ್ನು ನಾನು
ಸ್ವೀಕರಿಸಲಿಲ್ಲ. ಏಸಾವನಿರುವ ಬೆಟ್ಟಪ್ರದೇಶವನ್ನು ನಾನು
ಹಾಳುಮಾಡಿದೆನು. ಈಗ ಕಾಡುನಾಯಿಗಳು ಮಾತ್ರ ಅಲ್ಲಿ
ವಾಸಿಸುತ್ತವೆ" ಎಂದು ಹೇಳಿದನು.

4ಒಂದುವೇಳೆ ಎದೋಮ್ಯರು, "ನಾವು ನಾಶವಾಗಿ
ದ್ದೇವೆ. ಹೌದು, ಆದರೆ ನಾವು ಹಿಂದೆ ಹೋಗಿ ತಿರುಗಿ
ನಮ್ಮ ಪಟ್ಟಣಗಳನ್ನು ಕಟ್ಟುವೆವು" ಎನ್ನಬಹುದು.

ಸರ್ವಶಕ್ತನಾದ ಯೆಹೋವನು, "ಅವರು ಪಟ್ಟಣಗಳನ್ನು
ಮತ್ತೆ ಕಟ್ಟಿದರೆ ನಾನು ಮತ್ತೆ ನಾಶಮಾಡುವೆನು" ಎಂದು
ಹೇಳುತ್ತಾನೆ. ಆದ್ದರಿಂದಲೇ ಜನರು, "ಎದೋಮ್ ದುಷ್ಟ
ರಾಜ್ಯವಾಗಿದೆ, ಯೆಹೋವನು ನಿರಂತರವಾಗಿ ಅದನ್ನು
ದ್ವೇಷಿಸುತ್ತಾನೆ" ಎನ್ನುವರು.

5ಇದನ್ನು ನೋಡಿದವರಾದ ನೀವು, "ಯೆಹೋವನು
ಮಹಾದೇವರು. ಇಸ್ರೇಲಿನ ಹೊರಗೂ ತನ್ನ ಪ್ರತಾಪ
ವನ್ನು ತೋರಿಸುವನು" ಎಂದು ಹೇಳುತ್ತೀರಿ.

### ಯೆಹೋವನಿಗೆ ಜನರ ಅಗೌರವ

6ಸರ್ವಶಕ್ತನಾದ ಯೆಹೋವನು ಇಂತೆನ್ನುತ್ತಾನೆ:
"ಮಕ್ಕಳು ಹೆತ್ತವರನ್ನು ಗೌರವಿಸುವರು. ಸೇವಕರು
ಯಜಮಾನನನ್ನು ಗೌರವಿಸುತ್ತಾರೆ. ನಾನು ನಿಮ್ಮ ತಂದೆ
ಯಾಗಿದ್ದೇನೆ, ಆದರೆ ನನ್ನನ್ನು ಯಾಕೆ ಗೌರವಿಸುವುದಿಲ್ಲ?
ನಾನು ನಿಮ್ಮ ಯಜಮಾನನಾಗಿದ್ದೇನೆ, ಆದರೆ ನನ್ನನ್ನು
ನೀವೇಕೆ ಗೌರವಿಸುವುದಿಲ್ಲ? ಯಾಜಕರೇ, ನೀವು ನನ್ನ
ಹೆಸರನ್ನು ಗೌರವಿಸುವುದಿಲ್ಲ."

ಆದರೆ ನೀವು, "ನಾವು ನಿನಗೆ ಯಾವ ವಿಷಯದಲ್ಲಿ
ಗೌರವ ಕೊಟ್ಟಿಲ್ಲ" ಎಂದು ಕೇಳುತ್ತೀರಿ.

7"ನನ್ನ ಯಜ್ಞವೇದಿಕೆ ಮೇಲೆ ನೀವು ಅಶುದ್ಧ ರೊಟ್ಟಿ
ಗಳನ್ನು ಅರ್ಪಿಸುತ್ತೀರಿ" ಎಂದು ಯೆಹೋವನು
ಹೇಳುತ್ತಾನೆ.

"ಯಾವ ವಿಷಯದಲ್ಲಿ ಅದು ಅಶುದ್ಧವಾಯಿತು?" ಎಂದು
ನೀವು ಕೇಳುತ್ತೀರಿ.

ಅದಕ್ಕೆ ಯೆಹೋವನು, "ನನ್ನ ಯಜ್ಞವೇದಿಕೆಯನ್ನು
ನೀವು ಗೌರವಿಸುವುದಿಲ್ಲ. 8ನೀವು ಕುರುಡು ಪ್ರಾಣಿ
ಗಳನ್ನು ಯಜ್ಞಕ್ಕಾಗಿ ತರುತ್ತೀರಿ. ಅದು ತಪ್ಪಲ್ಲವೇ?
ಕುಂಟು, ರೋಗಪೀಡಿತ ಪಶುಗಳನ್ನು ಯಜ್ಞಾರ್ಪಣೆಗಾಗಿ
ತರುತ್ತೀರಿ. ಅದು ತಪ್ಪಲ್ಲವೇ? ನಿಮ್ಮ ರಾಜ್ಯಪಾಲನಿಗೆ
ನೀವು ಅಂಥ ಪ್ರಾಣಿಗಳನ್ನು ಕಾಣಿಕೆಯಾಗಿ ಕೊಟ್ಟರೆ
ಅವನು ಅದನ್ನು ಸ್ವೀಕರಿಸುವನೋ? ಇಲ್ಲ, ಅಂಥ ಕಾಣಿಕೆ
ಯನ್ನು ಅವನು ಸ್ವೀಕರಿಸುವುದೇ ಇಲ್ಲ." ಸರ್ವಶಕ್ತನಾದ
ಯೆಹೋವನೇ ಇದನ್ನು ಹೇಳಿದ್ದಾನೆ.

9"ಯಾಜಕರೇ, ಯೆಹೋವನು ನಮಗೆ ಶುಭವನ್ನು
ಉಂಟುಮಾಡುವಂತೆ ಆತನನ್ನು ಕೇಳಿಕೊಳ್ಳಿರಿ. ಆದರೆ
ಆತನು ನಿಮಗೆ ಕಿವಿಗೊಡುವುದಿಲ್ಲ. ನಿಮ್ಮ ದೋಷಗಳೇ
ಅದಕ್ಕೆ ಕಾರಣ." ಸರ್ವಶಕ್ತನಾದ ಯೆಹೋವನೇ ಇದನ್ನು
ಹೇಳಿದ್ದಾನೆ.

10"ನಿಮ್ಮಲ್ಲಿ ಕೆಲವು ಯಾಜಕರು ಆಲಯದ ಬಾಗಿಲು
ಗಳನ್ನು ಮುಚ್ಚಿ ಬೆಂಕಿಯನ್ನು ಸರಿಯಾದ ರೀತಿಯಲ್ಲಿ
ಹಚ್ಚುವರು. ಆದರೆ ನಾನು ನಿಮ್ಮನ್ನು ಮೆಚ್ಚುವುದಿಲ್ಲ.
ನಿಮ್ಮ ಕಾಣಿಕೆಗಳನ್ನು ಸ್ವೀಕರಿಸುವುದಿಲ್ಲ" ಸರ್ವಶಕ್ತನಾದ
ಯೆಹೋವನೇ ಇದನ್ನು ಹೇಳಿದಾನೆ.

11"ಭೂಲೋಕದ ಜನರೆಲ್ಲಾ ನನ್ನ ಹೆಸರನ್ನು
ಗೌರವಿಸುತ್ತಾರೆ; ಒಳ್ಳೆಯ ಕಾಣಿಕೆಗಳನ್ನು ತಂದೊಪ್ಪಿಸು
ತ್ತಾರೆ, ಒಳ್ಳೆಯ ಧೂಪವನ್ನು ಕಾಣಿಕೆಯಾಗಿ
ಅರ್ಪಿಸುತ್ತಾರೆ. ಯಾಕೆಂದರೆ ಅವರಿಗೆಲ್ಲಾ ನನ್ನ ನಾಮ
ಮಹತ್ತರವಾದದ್ದು, ವಿಶೇಷವಾದದ್ದು." ಸರ್ವಶಕ್ತನಾದ
ಯೆಹೋವನೇ ಇದನ್ನು ಹೇಳಿದಾನೆ.

12"ಆದರೆ ನೀವು ನನ್ನ ನಾಮವನ್ನು ಘನಪಡಿಸುವುದಿಲ್ಲ.
ನನ್ನ ಮೇಜು ಅಶುದ್ಧವಾದದ್ದೆಂದು ನೀವು ಹೇಳುತ್ತೀರಿ.
13ನೀವು ಆ ಮೇಜಿನಿಂದ ಆಹಾರವನ್ನು ತೆಗೆದುಕೊಳ್ಳುವು
ದಿಲ್ಲ. ನೀವು ಆಹಾರವನ್ನು ಮೂಸಿನೋಡಿ ಅದನ್ನು
ತಿನ್ನಲು ನಿರಾಕರಿಸುತ್ತೀರಿ. ಅದು ಚೆನ್ನಾಗಿಲ್ಲ ಎಂದು
ಹೇಳುತ್ತೀರಿ. ಆದರೆ ಅದು ನಿಜವಲ್ಲ. ಇದಲ್ಲದೆ ನೀವು
ರೋಗಪೀಡಿತವಾದ ಕುಂಟಾದ ಮತ್ತು ಕಳುವು ಮಾಡಿದ
ಪಶುಗಳನ್ನು ನನಗರ್ಪಿಸುತ್ತೀರಿ. ಆದರೆ ಅಂಥಾ ಪಶು
ಗಳನ್ನು ನಿಮ್ಮಿಂದ ನಾನು ಸ್ವೀಕರಿಸುವುದಿಲ್ಲ. 14ನಿಮ್ಮಲ್ಲಿ

ಕೆಲವರಲ್ಲಿ ಯಜ್ಞಕ್ಕೆ ಬೇಕಾಗಿರುವ ಒಳ್ಳೆಯ ಗಂಡು
ಪಶುಗಳು ಇದ್ದರೂ ಅವರು ನನಗೆ ಅವುಗಳನ್ನು ಸಮ
ರ್ಪಿಸುವುದಿಲ್ಲ. ಕೆಲವರು ಕಳಂಕವಿಲ್ಲದ ಪಶುಗಳನ್ನು
ನನಗೆ ತರುತ್ತಾರೆ. ಅವರು ಅಂಥ ಆರೋಗ್ಯಕರ ಪಶು
ಗಳನ್ನು ನನಗೆ ಸಮರ್ಪಿಸಲು ವಾಗ್ದಾನ ಮಾಡುವರು.
ಆದರೆ ಗುಪ್ತವಾಗಿ ಅವರು ಆ ಪಶುಗಳನ್ನು ಬದಲಿಸಿ
ನನಗೆ ರೋಗಿಯಾದ ಪಶುಗಳನ್ನು ಕೊಡುತ್ತಾರೆ. ಅವರಿಗೆ
ದುರ್ದೆಶೆ ಸಂಭವಿಸುವುದು. ನಾನು ದೊಡ್ಡ ಅರಸನು.
ನೀವು ನನ್ನನ್ನು ಗೌರವಿಸಬೇಕು. ಭೂಲೋಕದ ಸರ್ವ
ಜನರು ನನ್ನನ್ನು ಸನ್ಮಾನಿಸುವರು." ಸರ್ವಶಕ್ತನಾದ
ಯೆಹೋವನೇ ಇದನ್ನು ಹೇಳಿದಾನೆ.

### ಯಾಜಕರ ನಿಯಮಗಳು

**2** 1"ಯಾಜಕರೇ, ನನ್ನ ಮಾತನ್ನು ಕೇಳಿರಿ. ನಾನು
ಹೇಳುವುದಕ್ಕೆ ಗಮನ ಕೊಡಿರಿ. ಈ ನಿಯಮ
ಗಳನ್ನು ನಿಮಗಾಗಿ ಹೇಳುತ್ತಿದ್ದೇನೆ. 2ನನ್ನ ನಾಮವನ್ನು
ಘನಪಡಿಸದೆ ಹೋದರೆ ಕೇಡುಗಳು ನಿಮಗೆ
ಪ್ರಾಪ್ತಿಯಾಗುವವು. ನೀವು ಆಶೀರ್ವದಿಸುವಿರಿ. ಆದರೆ
ಅದು ಶಾಪವಾಗುವುದು. ಕೇಡುಗಳು ನಿಮಗಾಗುವಂತೆ
ನಾನು ಮಾಡುವೆನು. ಯಾಕೆಂದರೆ ನೀವು ನನ್ನ ಹೆಸರನ್ನು
ಘನಪಡಿಸುವುದಿಲ್ಲ." ಸರ್ವಶಕ್ತನಾದ ಯೆಹೋವನೇ
ಇದನ್ನು ಹೇಳಿದಾನೆ.
3"ನಿಮ್ಮ ಸಂತತಿಯವರನ್ನು ನಾನು ಶಿಕ್ಷಿಸುವೆನು.
ಯಾಜಕರೇ, ಹಬ್ಬದ ದಿವಸಗಳಲ್ಲಿ ನೀವು ನನಗೆ ಯಜ್ಞ
ಗಳನ್ನು ಅರ್ಪಿಸುತ್ತೀರಿ. ಪಶುವನ್ನು ಕೊಯ್ದ ಬಳಿಕ
ಅದರ ಒಳಗಿನ ಭಾಗಗಳನ್ನೂ ಅದರ ಮಲವನ್ನು ನಿಮ್ಮ
ಮುಖಗಳಿಗೆ ಹಚ್ಚುವೆನು ಮತ್ತು ನೀವು ಅದರೊಂದಿಗೆ
ಹೊರಗೆ ಬಿಸಾಡಲ್ಪಡುವಿರಿ. 4ನಾನು ಈ ಆಜ್ಞೆಯನ್ನು
ಯಾಕೆ ಕೊಡುತ್ತಿದ್ದೇನೆಂದು ಆಗ ನಿಮಗೆ ತಿಳಿಯುವುದು.
ಲೇವಿಯರೊಂದಿಗೆ ನಾನು ಮಾಡಿರುವ ಒಡಂಬಡಿಕೆಯು
ಮುಂದುವರಿಯುವ ಹಾಗೆ ನಾನು ಈ ಸಂಗತಿಗಳನ್ನು
ನಿಮಗೆ ತಿಳಿಸುತ್ತಿದ್ದೇನೆ." ಸರ್ವಶಕ್ತನಾದ ಯೆಹೋವನೇ
ಇದನ್ನು ಹೇಳಿದ್ದಾನೆ.
5⌊ಯೆಹೋವನು ಹೀಗೆನ್ನುತ್ತಾನೆ,⌋ "ಆ ಒಡಂಬಡಿಕೆ
ಯನ್ನು ನಾನು ಲೇವಿಯರೊಂದಿಗೆ ಮಾಡಿದೆನು. ನಾನು
ಅವನಿಗೆ ಜೀವವನ್ನು ಮತ್ತು ಸಮಾಧಾನವನ್ನು ವಾಗ್ದಾನ
ಮಾಡಿ ಅವನಿಗೆ ಅವುಗಳನ್ನು ಕೊಟ್ಟೆನು. ಲೇವಿಯು
ನನ್ನನ್ನು ಘನಪಡಿಸಿದನು. ನನ್ನ ಹೆಸರನ್ನು ಗೌರವಿಸಿ
ದನು. 6ಲೇವಿಯು ಸುಳ್ಳನ್ನು ಸಮರ್ಥಿಸದೆ ಸತ್ಯ
ಬೋಧನೆಯನ್ನು ಬೋಧಿಸಿದನು. ಅವನು ಪ್ರಮಾಣಿಕ
ನಾಗಿದ್ದು ಸಮಾಧಾನವನ್ನು ಪ್ರೀತಿಸುತ್ತಿದ್ದನು. ಲೇವಿಯು
ನನಗೆ ವಿಧೇಯನಾಗಿದ್ದು ಕೆಟ್ಟದಾರಿಯಲ್ಲಿ ಹೋಗು
ತ್ತಿರುವ ಎಷ್ಟೋ ಜನರನ್ನು ನನ್ನ ಶಿಕ್ಷೆಯಿಂದ ಪಾರು
ಮಾಡಿದನು. 7ಯಾಜಕನು ಯೆಹೋವನ ಬೋಧನೆ
ಯನ್ನು ಚೆನ್ನಾಗಿ ಅರಿತಿರಬೇಕು. ಜನರು ಯಾಜಕನ
ಬಳಿಗೆ ಹೋಗಿ ದೇವರ ಬೋಧನೆಯನ್ನು ಕೇಳಿ ತಿಳಿದು
ಕೊಳ್ಳಬೇಕು. ಯಾಜಕನು ದೇವರ ಸಂದೇಶವನ್ನು
ಜನರಿಗೆ ತಲುಪಿಸಬೇಕು.
8"ಆದರೆ ಯಾಜಕರೇ, ನೀವು ನನ್ನನ್ನು
ಹಿಂಬಾಲಿಸುವೂದನ್ನು ನಿಲ್ಲಿಸಿಬಿಟ್ಟಿರಿ. ಅನೇಕ ಜನರು
ತಪ್ಪುದಾರಿಯಲ್ಲಿ ಹೋಗುವಂತೆ ಮಾಡಲು ನೀವು
ಉಪದೇಶವನ್ನು ಬಳಸಿಕೊಂಡಿರಿ. ಲೇವಿಯೊಂದಿಗೆ
ಮಾಡಿದ ಒಡಂಬಡಿಕೆಯನ್ನು ನೀವು ಹಾಳುಮಾಡಿ
ಬಿಟ್ಟಿರಿ." ಸರ್ವಶಕ್ತನಾದ ಯೆಹೋವನೇ ಇದನ್ನು
ಹೇಳಿದ್ದಾನೆ. 9"ನಾನು ಹೇಳಿರುವ ಪ್ರಕಾರ ನೀವು
ಜೀವಿಸುತ್ತಿಲ್ಲ. ನೀವು ನನ್ನ ಉಪದೇಶವನ್ನು ಜನರಿಗೆ
ತಿಳಿಸುವಾಗ ಮುಖದಾಕ್ಷಿಣ್ಯ ಮಾಡುತ್ತೀರಿ. ಈ ಕಾರಣ
ದಿಂದಾಗಿ ನಿಮ್ಮನ್ನು ಗಣನೆಗೆ ಬಾರದವರಂತೆಯೂ
ಜನರು ನಿಮ್ಮನ್ನು ಸನ್ಮಾನಿಸದಂತೆಯೂ ಮಾಡುವೆನು."

### ದೇವರಿಗೆ ಯೆಹೂದದ ಅಪನಂಬಿಗಸ್ತಿಕೆ

10ನಮಗೆಲ್ಲರಿಗೂ ಒಬ್ಬನೇ ತಂದೆಯಾದ ದೇವರು.
ಆ ದೇವರೇ ನಮ್ಮೆಲ್ಲರನ್ನು ಉಂಟುಮಾಡಿದನು.
ಹೀಗಿರುವಾಗ ಜನರು ತಮ್ಮ ಸಹೋದರರಿಗೆ ಯಾಕೆ
ಮೋಸ ಮಾಡುತ್ತಾರೆ? ತಾವು ಒಡಂಬಡಿಕೆಯನ್ನು
ಗೌರವಿಸುವುದಿಲ್ಲವೆಂದು ಜನರಿಗೆ ತೋರ್ಪಡಿಸು
ತ್ತಾರೆ. ತಮ್ಮ ಪೂರ್ವಿಕರು ಯೆಹೋವನೊಂದಿಗೆ
ಮಾಡಿದ್ದ ಒಡಂಬಡಿಕೆಯನ್ನು ಅವರು ಗೌರವಿಸುವು
ದಿಲ್ಲ. 11ಯೆಹೂದದ ಜನರು ಬೇರೆ ಜನರಿಗೆ ಮೋಸ
ಮಾಡಿದರು. ಜೆರುಸಲೇಮಿನಲ್ಲಿಯೂ ಇಸ್ರೇಲಿನಲ್ಲಿಯೂ
ಇರುವ ಜನರು ಭಯಂಕರ ಕೃತ್ಯಗಳನ್ನು ಮಾಡಿದರು.
ದೇವರು ತನ್ನ ಆಲಯವನ್ನು ಪ್ರೀತಿಸುತ್ತಾನೆ. ಆದರೆ
ಯೆಹೂದದ ಜನರು ಗೊತ್ತಿಲ್ಲದ ದೇವತೆಗಳನ್ನು
ಪೂಜಿಸತೊಡಗಿದ್ದಾರೆ. 12ಅಂಥ ಜನರನ್ನು ಯೆಹೋವನು
ಯೆಹೂದ ವಂಶದಿಂದಲೇ ತೆಗೆದುಹಾಕುವನು. ಅವರು
ಯೆಹೋವನಿಗೆ ಕಾಣಿಕೆಗಳನ್ನು ತೆಗೆದುಕೊಂಡು ಬರ
ಬಹುದು. ಆದರೆ ಅದರಿಂದ ಪ್ರಯೋಜನವೇನೂ ಇಲ್ಲ.
13ನೀವು ಅತ್ತು ಗೋಳಾಡಿ ಯೆಹೋವನ ವೇದಿಕೆಯನ್ನು
ಕಣ್ಣೀರಿನಿಂದ ತೋಯಿಸಿದರೂ ಪ್ರಯೋಜನವಿಲ್ಲ.
ಯೆಹೋವನು ನಿಮ್ಮ ಕಾಣಿಕೆಯನ್ನು ಸ್ವೀಕರಿಸುವುದಿಲ್ಲ.
ನಿಮ್ಮ ಕಾಣಿಕೆಗಳನ್ನು ಆತನು ಮೆಚ್ಚುವುದಿಲ್ಲ.
14"ನಮ್ಮ ಕಾಣಿಕೆಗಳನ್ನು ಯೆಹೋವನು ಯಾಕೆ
ಸ್ವೀಕರಿಸುವುದಿಲ್ಲ?" ಎಂದು ನೀವು ಕೇಳಬಹುದು.
ಯಾಕೆಂದರೆ ನಿಮ್ಮ ಪಾಪಕೃತ್ಯಗಳನ್ನು ಆತನು
ನೋಡಿರುತ್ತಾನೆ. ಅವುಗಳಿಗೆ ವಿರೋಧವಾಗಿ ಆತನೇ
ಸಾಕ್ಷಿಯಾಗಿರುತ್ತಾನೆ. ನಿಮ್ಮ ಹೆಂಡತಿಯರಿಗೆ ನೀವು
ಮೋಸ ಮಾಡಿದ್ದನ್ನು ಆತನು ನೋಡಿದ್ದಾನೆ. ನೀವು
ಆಕೆಯನ್ನು ನಿಮ್ಮ ಯೌವನ ಕಾಲದಲ್ಲಿ ಹೆಂಡತಿ
ಯನ್ನಾಗಿ ಮಾಡಿಕೊಂಡಿರುತ್ತೀರಿ. ಆಕೆಯು ನಿಮ್ಮ ಆಪ್ತ
ಸ್ನೇಹಿತೆಯಾಗಿದ್ದಳು. ನೀವಿಬ್ಬರೂ ಮಾತುಕೊಟ್ಟಿರಿ.
ಆಕೆ ನಿಮ್ಮ ಹೆಂಡತಿಯಾದಳು. ಆದರೆ ನೀವು ಅವಳಿಗೆ
ಅಪನಂಬಿಗಸ್ಥರಾದಿರಿ. 15ದೇವರ ಇಚ್ಛೆಗನುಸಾರವಾಗಿ

ಗಂಡಹೆಂಡತಿಯರು ದೇಹದಲ್ಲಿಯೂ ಆತ್ಮದಲ್ಲಿಯೂ ಒಂದಾಗಿರಬೇಕು. ಆಗ ಅವರ ಮಕ್ಕಳೂ ಪರಿಶುದ್ಧ ರಾಗಿರುವರು. ಆದ್ದರಿಂದ ಆತ್ಮಿಕ ಅನ್ಯೋನ್ಯತೆಯನ್ನು ಕಾಪಾಡಿಕೊಳ್ಳಿರಿ. ನಿಮ್ಮ ಹೆಂಡತಿಯರಿಗೆ ಮೋಸ ಮಾಡಬೇಡಿ. ಯಾಕೆಂದರೆ ಯೌವನ ಪ್ರಾಯದಿಂದಲೂ ಆಕೆ ನಿಮ್ಮ ಹೆಂಡತಿಯಾಗಿದ್ದಾಳೆ.

16ಇಸ್ರೇಲಿನ ದೇವರಾದ ಯೆಹೋವನು ಹೇಳುವು ದೇನೆಂದರೆ, “ವಿವಾಹವಿಚ್ಛೇದನೆಯನ್ನು ನಾನು ದ್ವೇಷಿಸುತ್ತೇನೆ. ಮನುಷ್ಯನು ಮಾಡುವ ದುಷ್ಕೃತ್ಯವನ್ನು ನಾನು ದ್ವೇಷಿಸುತ್ತೇನೆ. ಆದ್ದರಿಂದ ನಿಮ್ಮ ಆತ್ಮೀಕ ಒಗ್ಗಟ್ಟನ್ನು ಕಾಪಾಡಿಕೊಳ್ಳಿರಿ. ನಿಮ್ಮ ಹೆಂಡತಿಯರಿಗೆ ಮೋಸ ಮಾಡಬೇಡಿರಿ.”

### ನ್ಯಾಯತೀರ್ಪಿನ ಕಾಲ

17ನೀವು ತಪ್ಪಾದ ವಿಷಯಗಳನ್ನು ಬೋಧಿಸಿದ್ದೀರಿ. ಆ ದುರ್ಬೋಧನೆಯು ಯೆಹೋವನನ್ನು ದುಃಖಗೊಳಿಸಿದೆ. ಯೆಹೋವನು ದುಷ್ಟರನ್ನು ಪ್ರೀತಿಸುತ್ತಾನೆ ಎಂದು ಜನರಿಗೆ ಬೋಧಿಸಿದ್ದೀರಿ. ದುಷ್ಟರನ್ನು ಯೆಹೋವನು ಒಳ್ಳೆಯವ ರೆಂದು ಕರೆಯುತ್ತಾನೆ ಎಂದು ನೀವು ಜನರಿಗೆ ಕಲಿಸಿ ದ್ದೀರಿ. ಅಲ್ಲದೆ ಪಾಪಮಾಡುವ ಜನರನ್ನು ಯೆಹೋವನು ಶಿಕ್ಷಿಸುವದಿಲ್ಲವೆಂದೂ ನೀವು ಹೇಳಿದ್ದೀರಿ.

3 1ಸರ್ವಶಕ್ತನಾದ ಯೆಹೋವನು ಇಂತೆನ್ನುತ್ತಾನೆ: “ನನ್ನ ಮಾರ್ಗವನ್ನು ಸಿದ್ಧಮಾಡಲು ನಾನು ಮುಂದೂತನನ್ನು ಕಳುಹಿಸುತ್ತೇನೆ. ನೀವು ಹುಡುಕು ತ್ತಿರುವ ಧಣಿಯು ತನ್ನ ಆಲಯಕ್ಕೆ ಬರುತ್ತಾನೆ. ಹೌದು, ನಿಮಗೆ ಬೇಕಾಗಿರುವ ಹೊಸ ಒಡಂಬಡಿಕೆಯ ಸಂದೇಶಕನು ನಿಜವಾಗಿಯೂ ಬರುತ್ತಿದ್ದಾನೆ.

2“ಆ ಸಮಯಕ್ಕಾಗಿ ಯಾರೂ ಸಿದ್ಧಮಾಡಿಕೊಳ್ಳ ಲಾರರು. ಆತನು ಬರುವಾಗ ಯಾರೂ ಆತನ ವಿರುದ್ಧವಾಗಿ ನಿಲ್ಲಲಾರರು. ಆತನು ಸುಡುವ ಬೆಂಕಿ ಯಾಗಿರುವನು. ಆತನು ಶಕ್ತಿಯುತವಾದ ಸಾಬೂನಿ ನಂತೆ ಕೊಳೆಯನ್ನು ಹೋಗಲಾಡಿಸಿ ಶುದ್ಧಮಾಡುವನು.
3ಆತನು ಲೇವಿಯರನ್ನು ಶುದ್ಧಮಾಡುವನು. ಅವರನ್ನು ಬೆಂಕಿಯಿಂದ ಪರಿಶುದ್ಧ ಮಾಡುವನು. ಅಪ್ಪಟ ಚಿನ್ನ ಬೆಳ್ಳಿಗಳಂತೆ ಆತನು ಅವರನ್ನು ಶುದ್ಧಿಮಾಡುವನು. ಆಗ ಅವರು ಯೆಹೋವನಿಗೆ ಕಾಣಿಕೆಗಳನ್ನು ತರುವರು; ಸರಿಯಾದ ರೀತಿಯಲ್ಲಿ ಕಾಣಿಕೆಗಳನ್ನು ಅರ್ಪಿಸು
ವರು. 4ಜೆರುಸಲೇಮಿನಿಂದಲೂ ಯೆಹೂದದಿಂದಲೂ ಯೆಹೋವನು ಕಾಣಿಕೆಗಳನ್ನು ಸ್ವೀಕರಿಸುವನು. ಹಿಂದಿನ ಕಾಲದಲ್ಲಿದ್ದಂತೆಯೇ ಈಗಲೂ ಆಗುವುದು. ಬಹಳ ವರ್ಷಗಳ ಹಿಂದಿನ ಕಥೆಯೇ ಈಗಲೂ ಆಗುವುದು.
5ಆಗ ನಾನು ನಿಮ್ಮ ಬಳಿಗೆ ಬಂದು ಯೋಗ್ಯವಾದ ಕಾರ್ಯವನ್ನು ಮಾಡುವೆನು. ದುಷ್ಕೃತ್ಯಗಳನ್ನು ಮಾಡಿದ ಜನರ ಬಗ್ಗೆ ನ್ಯಾಯಾಧೀಶರಿಗೆ ದೂರು ಹೇಳುವ ಮನುಷ್ಯ ನಂತಿರುವೆನು. ಕೆಲವರು ಮಾಟಮಂತ್ರ ಮಾಡುವರು; ಕೆಲವರು ವ್ಯಭಿಚಾರ ಮಾಡುವರು; ಕೆಲವರು ಸುಳ್ಳು ವಾಗ್ದಾನಗಳನ್ನು ಮಾಡುವರು; ಕೆಲವರು ಕೂಲಿಯಾಳು ಗಳಿಗೆ ಹೇಳಿದ ಕೂಲಿಯನ್ನು ಕೊಡದೆ ಅವರಿಗೆ ಮೋಸ ಮಾಡುವರು. ಜನರು ವಿಧವೆಯರಿಗೂ ಅನಾಥರಿಗೂ ಸಹಾಯ ಮಾಡುವುದಿಲ್ಲ. ಪರದೇಶಿಗಳಿಗೆ ಸಹಾಯ ಮಾಡುವುದಿಲ್ಲ. ನನಗೆ ಗೌರವ ಸಲ್ಲಿಸುವುದಿಲ್ಲ.” ಸರ್ವಶಕ್ತನಾದ ಯೆಹೋವನೇ ಇದನ್ನು ಹೇಳಿದ್ದಾನೆ.

### ದೇವರಿಂದ ಕದ್ದುಕೊಳ್ಳುವದು

6“ನಾನು ದೇವರಾದ ಯೆಹೋವನು. ನಾನು ಬದ ಲಾಗದ ದೇವರು. ನೀವು ಯಾಕೋಬನ ಮಕ್ಕಳು. ನೀವು ಸಂಪೂರ್ಣವಾಗಿ ನಾಶವಾಗಲಿಲ್ಲ. 7ನೀವು ನನ್ನ ಆಜ್ಞೆ
ಗಳಿಗೆ ವಿಧೇಯರಾಗಲಿಲ್ಲ. ನಿಮ್ಮ ಪೂರ್ವಿಕರು ನನ್ನನ್ನು ಅನುಸರಿಸುವದನ್ನು ನಿಲ್ಲಿಸಿಬಿಟ್ಟಿದ್ದರು. ನೀವು ಹಿಂತಿರುಗಿ ನನ್ನ ಬಳಿಗೆ ಬಂದರೆ ನಾನು ನಿಮ್ಮ ಬಳಿಗೆ ಬರುವೆನು.” ಸರ್ವಶಕ್ತನಾದ ಯೆಹೋವನೇ ಇದನ್ನು ಹೇಳಿದ್ದಾನೆ.

“ನಾವು ಹೇಗೆ ಹಿಂತಿರುಗಿ ಬರಬೇಕು?” ಎಂದು ನೀವು ಕೇಳುತ್ತೀರೋ?

8ದೇವರಿಂದ ಕದ್ದುಕೊಳ್ಳುವುದನ್ನು ನಿಲ್ಲಿಸಿರಿ. ಮನುಷ್ಯನು ದೇವರಿಂದ ಕದ್ದುಕೊಳ್ಳಬಾರದು. ಆದರೆ ನೀವು ನನ್ನಿಂದ ಕದ್ದುಕೊಂಡಿದ್ದೀರಿ.

“ನಿನ್ನಿಂದ ಏನು ಕದ್ದುಕೊಂಡಿದ್ದೇವೆ” ಎಂದು ಕೇಳು ತ್ತೀರಾ?

“ನಿಮ್ಮ ದಶಮ ಭಾಗವನ್ನು ನೀವು ನನಗೆ ಅರ್ಪಿಸ ಬೇಕಿತ್ತು. ವಿಶೇಷ ಕಾಣಿಕೆಗಳನ್ನು ನೀವು ನನಗೆ ಕೊಡ ಬೇಕಿತ್ತು. ಆದರೆ ನೀವು ಹಾಗೆ ಮಾಡಲಿಲ್ಲ. 9ಹೀಗೆ ನಿಮ್ಮ
ಇಡೀ ಜನಾಂಗವೇ ನನ್ನಿಂದ ಕದ್ದುಕೊಂಡಿದೆ. ಆದ್ದರಿಂದ ನಿಮಗೆ ಕೇಡು ಸಂಭವಿಸುವುದು.” ಸರ್ವಶಕ್ತನಾದ ಯೆಹೋವನೇ ಇದನ್ನು ಹೇಳಿದ್ದಾನೆ.

10ಸರ್ವಶಕ್ತನಾದ ಯೆಹೋವನು ಹೇಳುವು ದೇನೆಂದರೆ, “ನೀವು ಈ ಪರೀಕ್ಷೆ ಮಾಡಿನೋಡಿ. ನಿಮ್ಮ ವಸ್ತುಗಳ ಹತ್ತನೇ ಒಂದು ಭಾಗವನ್ನು ನನಗೆ ತೆಗೆದು ಕೊಂಡು ಬನ್ನಿರಿ. ಅವುಗಳನ್ನು ಆಲಯದ ಬಂಡಾರ ದೊಳಗೆ ಹಾಕಿರಿ. ನನ್ನ ಮನೆಗೆ ನೀವು ಆಹಾರ ವಸ್ತು ಗಳನ್ನು ತನ್ನಿರಿ. ನನ್ನನ್ನು ಪರೀಕ್ಷಿಸಿರಿ. ನೀವು ಹೀಗೆ ಮಾಡುವುದಾದರೆ ಖಂಡಿತವಾಗಿಯೂ ನಾನು ನಿಮ್ಮನ್ನು ಆಶೀರ್ವದಿಸುವೆನು. ಆಕಾಶದಿಂದ ಮಳೆ ಸುರಿಯುವಂತೆ ನಿಮಗೆ ಶುಭವು ಸುರಿಯುವುದು. ಯಾವಾಗಲೂ ನಿಮ್ಮ ಮನೆಯಲ್ಲಿ ನಿಮ್ಮ ಅಗತ್ಯತೆಗಿಂತಲೂ ಹೆಚ್ಚಾಗಿರುವುದು.
11ನಿಮ್ಮ ಬೆಳೆಗಳು ಹುಳಗಳಿಂದ ನಾಶವಾಗದಂತೆ ನಾನು ಸಂರಕ್ಷಿಸುವೆನು; ನಿಮ್ಮ ದ್ರಾಕ್ಷಾಲತೆಗಳೆಲ್ಲಾ ದ್ರಾಕ್ಷಿಯನ್ನು ಫಲಿಸುವವು.” ಸರ್ವಶಕ್ತನಾದಯೆಹೋವನೇ ಇದನ್ನು ಹೇಳಿದ್ದಾನೆ.

12“ಇತರ ಜನಾಂಗಗಳವರು ನಿಮ್ಮೊಂದಿಗೆ ಸಮಾಧಾನದಿಂದಿರುವರು. ನಿಜವಾಗಿಯೂ ನಿಮ್ಮ ದೇಶವು ಆಗ ಆಶ್ಚರ್ಯಕರವಾದ ದೇಶವಾಗಿರುವುದು.” ಸರ್ವಶಕ್ತನಾದ ಯೆಹೋವನೇ ಇದನ್ನು ಹೇಳಿದ್ದಾನೆ.

### ನ್ಯಾಯತೀರ್ಪಿನ ವಿಶೇಷ ಕಾಲ

13ಯೆಹೋವನು, “ನೀವು ನನಗೆ ವಿರುದ್ಧವಾಗಿ ಕೆಟ್ಟ
ಮಾತುಗಳನ್ನು ಆಡಿದಿರಿ” ಎನ್ನುತ್ತಾನೆ.

ಅದಕ್ಕೆ ನೀವು “ನಿನ್ನ ವಿರುದ್ಧವಾಗಿ ಏನು ಹೇಳಿದ್ದೇವೆ?”
ಎಂದು ಕೇಳುತ್ತೀರಿ.

14ನೀವು, “ದೇವರಾದ ಯೆಹೋವನನ್ನು ಆರಾಧಿಸು
ವುದು ನಿಷ್ಪ್ರಯೋಜಕ. ಆತನ ಕಟ್ಟಳೆಗಳನ್ನು ನಾವು
ಅನುಸರಿಸಿದೆವು. ಆದರೆ ಅದರಿಂದ ನಮಗೇನೂ ಲಾಭ
ವಾಗಲಿಲ್ಲ. ಸಮಾಧಿಯಲ್ಲಿ ಜನರು ರೋಧಿಸುವಂತೆ ನಮ್ಮ
ಪಾಪಗಳಿಗಾಗಿ ನಾವು ರೋಧಿಸಿದೆವು. ಆದರೆ ಅದರಿಂದ
ನಮಗೇನೂ ಸಹಾಯವಾಗಲಿಲ್ಲ. 15ಗರ್ವಿಷ್ಟರು
ಸಂತೋಷವಾಗಿದ್ದಾರೆ. ದುಷ್ಟರು ಅಭಿವೃದ್ಧಿ ಹೊಂದು
ತ್ತಿದ್ದಾರೆ, ದೇವರ ತಾಳ್ಮೆಯನ್ನು ಪರೀಕ್ಷಿಸಲು ದುಷ್ಕೃತ್ಯ
ಗಳನ್ನು ಮಾಡುತ್ತಿದ್ದಾರೆ. ಆದರೆ ದೇವರು ಅವರನ್ನು
ಶಿಕ್ಷಿಸಲಿಲ್ಲ” ಎಂದು ಹೇಳಿದಿರಿ.

16ದೇವರನ್ನು ಅನುಸರಿಸುವ ಭಕ್ತರು ಒಬ್ಬರಿಗೊಬ್ಬರು
ಮಾತಾಡಿಕೊಳ್ಳುವುದನ್ನು ಯೆಹೋವನು ಕೇಳಿದನು.
ಆತನ ಮುಂದೆ ದೇವಜನರ ಹೆಸರುಗಳನ್ನು ಬರೆದಿರುವ
ಒಂದು ಪುಸ್ತಕವಿತ್ತು. ಯೆಹೋವನ ಹೆಸರನ್ನು ಘನ
ಪಡಿಸುವವರ ಹೆಸರುಗಳು ಅದರಲ್ಲಿದ್ದವು.

17ಯೆಹೋವನು ಹೇಳುವುದೇನೆಂದರೆ, “ಅವರು
ನನ್ನ ಜನರು. ನಾನು ಅವರಿಗೆ ಕರುಣೆ ತೋರುವೆನು.
ತಂದೆಯು ತನಗೆ ವಿಧೇಯರಾಗಿರುವ ತನ್ನ ಮಕ್ಕಳ
ಮೇಲೆ ಕನಿಕರ ಉಳ್ಳವನಾಗಿರುತ್ತಾನೆ. ಅದೇ ರೀತಿಯಲ್ಲಿ
ನನ್ನನ್ನು ಅನುಸರಿಸುವವರಿಗೆ ನಾನು ದಯೆತೋರುವೆನು.
18ನೀವು ನನ್ನ ಬಳಿಗೆ ಹಿಂತಿರುಗಿ ಬರುವಿರಿ. ಆಗ ನೀವು
ಒಳ್ಳೆಯವರಿಗೂ ಕೆಟ್ಟವರಿಗೂ ಇರುವ ವ್ಯತ್ಯಾಸವನ್ನು
ತಿಳಿದುಕೊಳ್ಳುವಿರಿ. ಆಗ ನೀವು ದೇವರನ್ನು ಹಿಂಬಾ
ಲಿಸುವವರಿಗೂ ಹಿಂಬಾಲಿಸದೆ ಇರುವವರಿಗೂ ಇರುವ
ವ್ಯತ್ಯಾಸವನ್ನು ನೋಡುವಿರಿ.

**4** 1“ಆ ನ್ಯಾಯತೀರ್ಪಿನ ದಿನವು ಬರುತ್ತಿದೆ. ಅದು
ಕುಲುಮೆಯಂತೆ ತೀಕ್ಷ್ಣವಾಗಿರುವುದು. ಅಹಂಕಾರಿ
ಗಳೆಲ್ಲಾ ಶಿಕ್ಷಿಸಲ್ಪಡುವರು. ದುಷ್ಟಜನರೆಲ್ಲಾ ಹುಲ್ಲಿನಂತೆ
ಸುಟ್ಟುಹೋಗುವರು. ಆ ಸಮಯದಲ್ಲಿ ಒಂದು ಪೊದೆಯು
ಬೆಂಕಿಯಲ್ಲಿ ಸುಡುವಂತೆ ಸುಟ್ಟುಹೋಗುವರು. ಆದರೆ
ಕೊಂಬೆ ಅಥವಾ ಬೇರು ಯಾವುದೂ ಉಳಿಯುವುದಿಲ್ಲ.”
ಸರ್ವಶಕ್ತನಾದ ಯೆಹೋವನೇ ಇದನ್ನು ಹೇಳಿದ್ದಾನೆ.

2“ನನ್ನನ್ನು ಹಿಂಬಾಲಿಸುವವರ ಮೇಲೆ ಸೂರ್ಯನ
ಪ್ರಕಾಶದಂತೆ ಶುಭವು ಪ್ರಕಾಶಿಸುವದು. ಸೂರ್ಯನ
ಕಿರಣಗಳಂತೆ ಅದು ಗುಣಪಡಿಸುವ ಶಕ್ತಿಯನ್ನು ಹೊಂದು
ವದು. ಕೊಟ್ಟಿಗೆಯಿಂದ ಬಿಟ್ಟ ಕರುಗಳಂತೆ ನೀವು
ಸ್ವತಂತ್ರರಾಗಿಯೂ ಸಂತೋಷವಾಗಿಯೂ ಇರುವಿರಿ.
3ಆಗ ನೀವು ದುಷ್ಟಜನರ ಮೇಲೆ ನಡೆದುಕೊಂಡು
ಹೋಗುವಿರಿ; ಅವರು ನಿಮ್ಮ ಕಾಲುಗಳ ಕೆಳಗೆ ಬೂದಿ
ಯಂತಿರುವರು. ನ್ಯಾಯತೀರ್ಪಿನ ಸಮಯದಲ್ಲಿ ನಾನು
ಹಾಗೆ ಮಾಡುವೆನು.” ಸರ್ವಶಕ್ತನಾದ ಯೆಹೋವನೇ
ಇದನ್ನು ಹೇಳಿದ್ದಾನೆ

4“ನನ್ನ ಸೇವಕನಾದ ಮೋಶೆಯ ಕಟ್ಟಳೆಗಳನ್ನು ಅನು
ಸರಿಸಲು ಮರೆಯಬೇಡಿ. ಹೋರೇಬ್ ಬೆಟ್ಟದಲ್ಲಿ ನಾನು
ಆ ನ್ಯಾಯವಿಧಿಗಳನ್ನು ಅವನಿಗೆ ಕೊಟ್ಟೆನು. ಆ ಕಟ್ಟಳೆ
ಗಳೆಲ್ಲಾ ಇಸ್ರೇಲ್ ಜನರಿಗಾಗಿ ಇರುವುದು.”

5ಯೆಹೋವನು ಇಂತೆನ್ನುತ್ತಾನೆ, “ನಾನು ಪ್ರವಾದಿ
ಯಾದ ಎಲೀಯನನ್ನು ನಿಮ್ಮ ಬಳಿಗೆ ಕಳುಹಿಸುವೆನು.
ಅವನು ಯೆಹೋವನಿಂದ ಪ್ರಾಪ್ತಿಯಾಗುವ ಭಯಂಕರ
ವಾದ ಮಹಾ ನ್ಯಾಯತೀರ್ಪಿನ ಕಾಲದಲ್ಲಿ ಬರುವನು.
6ತಂದೆತಾಯಿಗಳು ಮಕ್ಕಳಿಗೂ ಮಕ್ಕಳು ತಂದೆತಾಯಿ
ಗಳಿಗೂ ನಿಕಟ ಸಂಬಂಧಿಗಳಾಗುವಂತೆ ಅವನು
ಮಾಡುವನು. ಇದು ನೆರವೇರಲೇಬೇಕು, ಇಲ್ಲವಾದರೆ
ನಾನು ಬಂದು ನಿಮ್ಮ ದೇಶವನ್ನು ಸಂಪೂರ್ಣವಾಗಿ ನಾಶ
ಮಾಡುವೆನು.”